■ ಹನಿ

## ಇಳಿವಯಸ್ಸಿನ ಕಿರಿಕಿರಿ



**ಬಾ**ಲಿವುಡ್ ಕಂಡ ಅಪರೂಪದ ನಟ ಓಂ ಪುರಿ. 80ರ ದಶಕದ ಕಲಾತ್ಮಕ ಹಿಂದಿ ಸಿನಿಮಾಗಳಲ್ಲಿ ಓಂ ಪುರಿ ನಿರ್ದೇಶಕರ ಅನಿವಾರ್ಯ ಆಯ್ಕೆ. ಬಳಿಕ ಕಮರ್ಷಿಯಲ್ ಚಿತ್ರಗಳಲ್ಲೂ ಯಶಸ್ವಿಯಾದರು. ಸಾಮಾನ್ಯವಾಗಿ ಮುಖದ ತುಂಬ ಕಲೆಗಳಿರುವ ವ್ಯಕ್ತಿಗೆ ಕಮರ್ಷಿಯಲ್ ಚಿತ್ರಗಳಲ್ಲಿ ವಿಲ್ಲನ್ ಪಾತ್ರವೇ ಗಟ್ಟಿ. ಆದರೆ ಆ ಸಾಂಪ್ರದಾಯಕ ಚೌಕಟ್ಟನ್ನು ಓಂ ಪುರಿ ತಮ್ಮ ನಟನಾ ಸಾಮರ್ಥ್ಯದಿಂದಲೇ ಮುರಿದು ಬೆಳೆದರು. ಸೌಂದರ್ಯಮುಖಿ ಬಾಲಿವುಡ್‌ನಲ್ಲಿ ಹೀರೋಗೆ ಸಂವಾದಿಯಾಗಿ ಪೋಷಕ ಪಾತ್ರಗಳಲ್ಲೂ ಮಿಂಚಿದರು. ತಮ್ಮ ನಟನೆಯಿಂದಾಗಿ ಲಕ್ಷಾಂತರ ಅಭಿಮಾನಿಗಳನ್ನು ಗಳಿಸಿಕೊಂಡಿರುವ ಓಂ ರಾಜೇಶ್ ಪುರಿ (ಬರ್ತ್‌ಡೇ 18/10/1948) ಈಗ 64ರ ಇಳಿವಯಸ್ಸಿನಲ್ಲಿ ಹೆಂಡತಿಗೆ ಹೊಡೆದು ಪೊಲೀಸರ ಬಂಧನಕ್ಕೆ ಒಳಗಾಗಿದ್ದಾರೆ. 10 ಸಾವಿರ ರೂಪಾಯಿಗಳ ಬಾಂಡ್ ಮೇಲೆ ಬಂಧನದಿಂದ ಬಿಡುಗಡೆ ಆಗಿದ್ದರೂ, ಅವರ ವ್ಯಕ್ತಿತ್ವದ ಮೇಲೆ ಗಾಢ ಕಪ್ಪು ಕಲೆಗಳಂತೂ ಬಿದ್ದಿವೆ. ಬಹುತೇಕ ಸಿನಿಮಾಗಳಲ್ಲಿ ಹೆಣ್ಣನ್ನು ಗೌರವಿಸುವ ಒಳ್ಳೆಯ ಪಾತ್ರಗಳಲ್ಲಿ ನಟಿಸಿದವನೊಬ್ಬ ಹೀಗೆ ಮನೆಯಲ್ಲೇ ಹೆಣ್ಣನ್ನು ಅವಮಾನಿಸುವ ಕೆಲಸಕ್ಕೆ ಇಳಿದರೆ ಅಭಿಮಾನಿಗಳು ಮೆಚ್ಚುವುದು ಕಷ್ಟ.

ಓಂಪುರಿಯವರ ಎರಡನೇ ಪತ್ನಿ ನಂದಿತಾ ಜತೆಗೆ ಒಂದು ವರ್ಷದಿಂದಲೂ ಗುದ್ದಾಟ ನಡೆದೇ ಇತ್ತು. ಜಗಳ ಬಗೆಹರಿದು ಗಂಡ-ಹೆಂಡತಿ ದೂರ ದೇಶಕ್ಕೆ ತಿರುಗಾಟಕ್ಕೆ ಹೋದರೆಂಬ ಸುದ್ದಿಯೂ ಬಂದಿತ್ತು. ಆದರೆ ಈಗ ಮತ್ತೆ ಬೀದಿಗಿಳಿದಿದ್ದಾರೆ. ಇದಕ್ಕೂ ಮುನ್ನ ಮೊದಲ ಪತ್ನಿಯ ಜತೆಗೂ ಓಂಪುರಿ ಹೀಗೆಯೇ ಗುದ್ದಾಟ ನಡೆಸಿದ್ದರಂತೆ. ಆಕೆಗೆ ವಿಚ್ಛೇದನ ನೀಡದೆ ಎರಡನೇ ಪತ್ನಿಯ ಜತೆ ವಾಸಿಸುತ್ತಿದ್ದರಂತೆ. ಎರಡನೆಯ ಪತ್ನಿಯ ಜತೆ ಜಗಳ ಶುರುವಾದ ಬಳಿಕ, ಮೊದಲ ಪತ್ನಿಯ ಜತೆಗೆ ಚೆನ್ನಾಗಿದ್ದಾರಂತೆ– ಹೀಗೆ ಬಾಲಿವುಡ್ ತುಂಬಾ ಅಂತೆ– ಕಂತೆ! ಎರಡು ವರ್ಷಗಳ ಹಿಂದೆ ಅಣ್ಣಾ ಹಜಾರೆಯವರ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಓಂ ಪುರಿ ಸಂಸತ್ ಸದಸ್ಯರ ವಿರುದ್ಧ ಮಾಡಿದ ಕಟು-ಟೀಕೆಯ ಹಿನ್ನೆಲೆಯಲ್ಲಿ, ಅವರ ವಿರುದ್ಧ ಹಕ್ಕುಚ್ಯುತಿ ನೋಟಿಸ್ ಕೂಡಾ ಜಾರಿಯಾಗಿತ್ತು.

ವ್ಯಕ್ತಿಗತ ಬದುಕು ಏನೇ ಇರಲಿ, ನಟನೆಯಲ್ಲಿ ಓಂ ಪುರಿಯನ್ನು ಹಿಂದಿಕ್ಕುವುದು ಕಷ್ಟ. 80ರ ದಶಕದಲ್ಲಿ ಆರೋಹಣ್ ಮತ್ತು ಅರ್ಧಸತ್ಯ ಸಿನಿಮಾಗಳ ನಟನೆಗೆ ಎರಡು ಬಾರಿ ಅತ್ಯುತ್ತಮ ನಟ ರಾಷ್ಟ್ರೀಯ ಪ್ರಶಸ್ತಿ ಪಡೆದಿರುವ ಓಂ ಪುರಿಯವರ ಆಕ್ರೋಶ್, ಮಾಚಿಸ್ ಮುಂತಾದ ಚಿತ್ರಗಳ ಪಾತ್ರಗಳನ್ನು ಈಗಲೂ ಜನ ನೆನಪಿಸಿಕೊಳ್ಳುತ್ತಾರೆ. ಮೂರು ಇಂಗ್ಲೆಂಡಿನ ಚಿತ್ರಗಳಲ್ಲೂ, ಆರು ಬಾಲಿವುಡ್ ಚಿತ್ರಗಳಲ್ಲೂ ನಟಿಸಿ ಅಂತರರಾಷ್ಟ್ರೀಯ ಮಟ್ಟದಲ್ಲೂ ಮಿಂಚಿದ್ದಾರೆ. ಕನ್ನಡದ 'ಎ.ಕೆ 47' ಚಿತ್ರದಲ್ಲಿ ನಟಿಸಿದಾಗ ತಾವೇ ಸ್ವತಃ ಧ್ವನಿ ನೀಡಿದ್ದು ಹೆಗ್ಗಳಿಕೆಯೇ. ಕಾಮಿಡಿ ಸಿನಿಮಾಗಳಲ್ಲೂ, ಟೀವಿ ಧಾರಾವಾಹಿಗಳಲ್ಲೂ ಯಶಸ್ವಿಯಾಗಿರುವ ಓಂ ಪುರಿಯವರ ವ್ಯಕ್ತಿ ಜೀವನ ಅವರಿವರು ಆಡಿಕೊಳ್ಳುವ ಕಾಮಿಡಿ ಆಗದಿರಲಿ. ●

## ಲೇಖಕ ಕುಂದ್ರಾ



ಐಪಿಎಲ್ ಕ್ರಿಕೆಟ್ ಬೆಟಿಂಗ್‌ನಲ್ಲಿ ಆರೋಪಿ ಎಂದು ಸುದ್ದಿಯಾಗಿದ್ದ ಬ್ರಿಟಿಶ್ ಏಷ್ಯನ್ ಉದ್ಯಮಿ ರಾಜ್ ಕುಂದ್ರಾ ಇದೀಗ ಹೊಸ ಥ್ರಿಲ್ಲರ್ ಕಾದಂಬರಿಯೊಂದನ್ನು ಬರೆದಿದ್ದಾರೆ. 'ಹಣ ಹೇಗೆ ಮಾಡಬಾರದು?' (ಹೌ ನಾಟ್ ಟು ಮೇಕ್ ಮನಿ) ಎನ್ನುವುದು ಈ ಕಾದಂಬರಿಯ ಹೆಸರು. ರ‍್ಯಾಂಡಮ್ ಹೌಸ್ ಇಂಡಿಯಾ ಪ್ರಕಟಿಸಿರುವ ಈ ಕೃತಿ ಅಕ್ಟೋಬರ್ 12ರಂದು ಮಾರುಕಟ್ಟೆಗೆ ಬರಲಿದೆಯಂತೆ. ಬೆಟಿಂಗ್‌ನ ವಿಚಾರಣೆಗೆ ಪೊಲೀಸರ ಮುಂದೆ ಹಾಜರಾಗಿದ್ದಾಗ, 'ಐಪಿಎಲ್ ಕ್ರಿಕೆಟ್ ಪಂದ್ಯಗಳ ವೇಳೆ ಬೆಟಿಂಗ್ ನಡೆಸಿದ್ದು ನಿಜ. ಆದರೆ ನಾನು ಹಣ ಕಳೆದುಕೊಂಡದ್ದೇ ಹೆಚ್ಚು' ಎಂದಿದ್ದರು ಕುಂದ್ರಾ. ಈಗ ತಮ್ಮ ಕಾದಂಬರಿಯಲ್ಲಿ, ಅರ್ಜೆಂಟಾಗಿ ಕೋಟಿಗಟ್ಟಳೆ ಹಣ ಮಾಡಲು ಹೊರಟ ಜೈ, ಮೈಕ್ ಮತ್ತು ಅಜೀಜ್ ಎಂಬ ಮೂವರು ಬಾಲ್ಯ ಸ್ನೇಹಿತರ ನೈಜ ಕಥೆಯನ್ನೇ ಬರೆದಿದ್ದಾರಂತೆ.

ಪಂಜಾಬಿನಿಂದ ಲಂಡನ್ನಿಗೆ ವಲಸೆ ಹೋಗಿ ಬಸ್ ಕಂಡಕ್ಟರ್ ಆಗಿದ್ದ ಅಪ್ಪನ ಮಗ ರಾಜ್. 18ರ ಹರೆಯದಲ್ಲೇ ಕಾಲೇಜು ತ್ಯಜಿಸಿ ಬಿಸಿನೆಸ್ ಶುರು ಮಾಡಿದವರು. ಅವರೀಗ ಲಂಡನ್ನಿನ ಅತ್ಯಂತ ಶ್ರೀಮಂತ 200 ಮಂದಿ ಬ್ರಿಟಿಶ್ ಏಷ್ಯನ್ ಉದ್ಯಮಿಗಳಲ್ಲಿ ಒಬ್ಬರು. 'ಎಸೆನ್ಶಿಯಲ್ ಜನರಲ್ ಟ್ರೇಡಿಂಗ್ ಎಲ್‌ಎಲ್‌ಸಿ' ಎಂಬ ಅವರ ದುಬೈ ಮೂಲದ ಕಂಪೆನಿ ಅಮೂಲ್ಯ ಹರಳು-ಗಳು, ನಿರ್ಮಾಣ, ಗಣಿಗಾರಿಕೆ, ಹಸಿರು ಇಂಧನ ಮುಂತಾದ ವ್ಯಾಪಾರಗಳಲ್ಲಿ ತೊಡಗಿದೆಯಂತೆ. ಮೊದಲ ಪತ್ನಿಯನ್ನು ತ್ಯಜಿಸಿ, ನಟಿ ಶಿಲ್ಪಾ ಶೆಟ್ಟಿ-ಯನ್ನು ಮದುವೆಯಾದ ಬಳಿಕ ಭಾರತದಲ್ಲೂ ಜನಪ್ರಿಯನಾದ ಈ 37ರ ತರುಣನಿಗೆ ಸಾಹಿತ್ಯ-ಲೋಕದ ಪ್ರತಿಕ್ರಿಯೆ ಹೇಗಿರಬಹುದೋ ಕಾದು ನೋಡಬೇಕು. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65